ಮಾಡತಕ್ಕಂಥ ಕೆಲಸ ಮಾಡಬೇಕು. ನನ್ನ ಕ್ಷೇತ್ರದಲ್ಲಿಯೇ 37 ಶಾಖಾ ಶಾಲೆಗಳು 7-8 ವರ್ಷಗಳಿಂದ ನಡೆದುಕೊಂಡು ಬರುತ್ತಿವೆ. ಆದುದರಿಂದ ದಯವಿಟ್ಟು ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕು ಎಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ : ಈ ಪ್ರಾಥಮಿಕ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವಂತಹ ಸಂದರ್ಭದಲ್ಲಿ ಗೌರವ ಶಿಕ್ಷಕರು ಎಂದು ಹೇಳಿ ಬಹಳ ವರ್ಷಗಳಿಂದ ವೇತನ ರಹಿತವಾಗಿ ಕೆಲಸ ಮಾಡುತ್ತಿರುವಂತಹವರಿಗೆ ವಿಶೇಷ ಪ್ರಾತಿನಿಧ್ಯ ಕೊಟ್ಟು ಅವರನ್ನು ಈ ಒಂದು ಭರ್ತಿಯಲ್ಲಿ ಹೆಚ್ಚಿನ ಕೃಪಾಂಕಗಳನ್ನು ಕೊಡಬೇಕು. ಅವರ ಪರಿಸ್ಥಿತಿ ಬಹಳ ಗಂಭೀರವಾಗಿದೆ. ನನ್ನ ಜಿಲ್ಲೆಯಲ್ಲಿ ಸುಮಾರು 200 ಜನ ಇಂತಹ ಗೌರವ ಶಿಕ್ಷಕರು ಅತ್ಯಂತ ಗಂಭೀರ ಪರಿಸ್ಥಿತಿಯಲ್ಲಿ ಇದ್ದಾರೆ. ದಯವಿಟ್ಟು ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಇದು ನಮ್ಮ ಅವಧಾನಕ್ಕೆ ಬಂದಿದೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಪ್ರತಿ ತಾಲ್ಲೂಕಿಗೊಂದು ಕ್ರೀಡಾಂಗಣ

34 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪ್ರತಿ ತಾಲ್ಲೂಕಿಗೆ ಒಂದು ಕ್ರೀಡಾಂಗಣ ನಿರ್ಮಿಸುವ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿ ಇದೆಯೇ?*

ಆ) *ಹಾಗಿದ್ದಲ್ಲಿ ಈವರೆಗೆ ಎಷ್ಟು ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲಾಗಿದೆ. ಇದಕ್ಕಾಗಿ ಖರ್ಚಾದ ಹಣ ಎಷ್ಟು (ಜಿಲ್ಲಾವಾರು ವಿವರ ನೀಡುವುದು)*

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ಹೌದು

ಆ) ಈವರೆಗೆ 68 ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದ್ದು, ಈಗಾಗಲೇ ಹೊಸಕೋಟೆ ಕ್ರೀಡಾಂಗಣದ ನಿರ್ಮಾಣ ಕಾರ್ಯವು ಮುಕ್ತಾಯಗೊಂಡಿದೆ ಮತ್ತು ಇನ್ನುಳಿದ ಕ್ರೀಡಾಂಗಣಗಳ ನಿರ್ಮಾಣ ಕಾರ್ಯಗಳು ವಿವಿಧ ಹಂತದಲ್ಲಿವೆ. ಈ ನಿರ್ಮಾಣ ಕಾರ್ಯಗಳಿಗಾಗಿ ಇಲ್ಲಿಯವರೆಗೆ ಮಾಡಲಾಗಿರುವ ಖರ್ಚಿನ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಶ್ರೀ ವಸಂತ ವಿ. ಸಾಲಿಯಾನ (ಕಾಪು ಕ್ಷೇತ್ರ) ಶಾಸಕರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 34ಕ್ಕೆ ನೀಡಿದ ಉತ್ತರಕ್ಕೆ ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆ	ಕ್ರೀಡಾಂಗಣ ನಿರ್ಮಾಣ ಮಾಡುತ್ತಿರುವ ತಾಲ್ಲೂಕು	ಆಡಳಿತಾತ್ಮಕ ಮಂಜೂರಾತಿ ನೀಡಿದೆಯೇ	ನಿರ್ಮಾಣವನ್ನು ಕೈಗೆತ್ತಿಕೊಂಡಿರುವ ಯೋಜನೆ ರಾಜ್ಯ ಘಟಕ	ಜಿಲ್ಲಾ ಪಂಚಾಯತ್ ಹೈ.ಕ.ಅಮ. ಘಟಕ		31-12-1994 (ಲಕ್ಷಗಳಲ್ಲಿ)
1	2	3	4	5	6	7	8
1)	ಬೆಂ.ನ.ಜಿಲ್ಲೆ	ಆನೇಕಲ್	ನೀಡಿದೆ		ಜಿ.ಪಂ.ಘಟಕ		ರೂ. 0.03
2)	ಬೆಂಗಳೂರು ಗ್ರಾ.	ರಾಮನಗರ	ನೀಡಿದೆ		ಜಿ.ಪಂ.ಘಟಕ		-
3)		ಮಾಗಡಿ	ನೀಡಿದೆ		ಜಿ.ಪಂ.ಘಟಕ		-
4)		ದೊಡ್ಡಬಳ್ಳಾಪುರ	ನೀಡಿದೆ		ಜಿ.ಪಂ.ಘಟಕ		14.01
5)		ಹೊಸಕೋಟೆ	ನೀಡಿದೆ	ರಾಜ್ಯ ಘಟಕ			14.01
6)	ಕೋಲಾರ	ಮಾಲೂರು	ನೀಡಿದೆ		ಜಿ.ಪಂ.ಘಟಕ		1.19
7)		ಚಿಕ್ಕಬಳ್ಳಾಪುರ	ನೀಡಿದೆ	ರಾಜ್ಯ ಘಟಕ			16.64
8)		ಬಾಗೇಪಲ್ಲಿ	ನೀಡಿದೆ		ಜಿ.ಪಂ.ಘಟಕ		2.06
9)		ಚಿಂತಾಮಣಿ	ನೀಡಿದೆ	ರಾಜ್ಯ ಘಟಕ			5.00
10)		ಶಿಡ್ಲಘಟ್ಟ	ನೀಡಿದೆ		ಜಿ.ಪಂ.ಘಟಕ		-
11)	ತುಮಕೂರು	ತಿಪಟೂರು	ನೀಡಿದೆ	ರಾಜ್ಯ ಘಟಕ			4.20
12)		ಮಧುಗಿರಿ	ನೀಡಿದೆ		ಜಿ.ಪಂ.ಘಟಕ		10.00
13)		ಸಿರಾ	ನೀಡಿದೆ		ಜಿ.ಪಂ.ಘಟಕ		3.00
14)		ಪಾವಗಡ	ನೀಡಿದೆ		ಜಿ.ಪಂ.ಘಟಕ		2.50
15)	ಶಿವಮೊಗ್ಗ	ಹೊನ್ನಾಳಿ	ನೀಡಿದೆ		ಜಿ.ಪಂ.ಘಟಕ		4.00

16)		ಸಾಗರ	ನೀಡಿದೆ	ರಾಜ್ಯ ಘಟಕ			28.61
17)		ಸೊರಬ	ನೀಡಿದೆ	ರಾಜ್ಯ ಘಟಕ			-
18)		ಹೊಸನಗರ	ನೀಡಿದೆ	.		ಜಿ.ಪಂ.ಘಟಕ	5.16
19)		ಶಿಕಾರಿಪುರ	ನೀಡಿದೆ	ರಾಜ್ಯ ಘಟಕ			4.50
20)	ಚಿತ್ರದುರ್ಗ	ಹೊಳಲ್ಕೆರೆ	ನೀಡಿದೆ			ಜಿ.ಪಂ.ಘಟಕ	-
21)	ಮೈಸೂರು	ಹನೂರು	ನೀಡಿದೆ			ಜಿ.ಪಂ.ಘಟಕ	ರೂ. 4.82
22)		ಗುಂಡ್ಲುಪೇಟೆ	ನೀಡಿದೆ			ಜಿ.ಪಂ.ಘಟಕ	-
23)		ಕೆ.ಆರ್.ನಗರ	ನೀಡಿದೆ			ಜಿ.ಪಂ.ಘಟಕ	18.55
24)		ಹೆಗ್ಗಡೆ ದೇವನಕೋಟೆ		ನೀಡಿದೆ		ಜಿ.ಪಂ.ಘಟಕ	5.00
25)	ಮಂಡ್ಯ	ಮದ್ದೂರು	ನೀಡಿದೆ			ಜಿ.ಪಂ.ಘಟಕ	15.00
26)	ಹಾಸನ	ಅರಸೀಕೆರೆ	ನೀಡಿದೆ			ಜಿ.ಪಂ.ಘಟಕ	5.65
27)		ಜಾವಗಲ್	ನೀಡಿದೆ			ಜಿ.ಪಂ.ಘಟಕ	0.50
28)		ಹೊಳೆನರಸೀಪುರ	ನೀಡಿದೆ	ರಾಜ್ಯ ಘಟಕ		ಜಿ.ಪಂ.ಘಟಕ	9.90
29)		ಸಕಲೇಶಪುರ	ನೀಡಿದೆ			ಜಿ.ಪಂ.ಘಟಕ	7.50
30)		ಬೇಲೂರು	ನೀಡಿದೆ			ಜಿ.ಪಂ.ಘಟಕ	1.25
31)	ಚಿಕ್ಕಮಗಳೂರು	ಮೂಡಿಗೆರೆ	ನೀಡಿದೆ			ಜಿ.ಪಂ.ಘಟಕ	4.50
32)		ತರೀಕೆರೆ	ನೀಡಿದೆ			ಜಿ.ಪಂ.ಘಟಕ	4.20
33)		ಕಡೂರು	ನೀಡಿದೆ			ಜಿ.ಪಂ.ಘಟಕ	4.66
34)	ಕೊಡಗು	ಪೊನ್ನಮ್‌ಪೇಟೆ	ನೀಡಿದೆ			ಜಿ.ಪಂ.ಘಟಕ	7.44
35)		ಸೋಮವಾರಪೇಟೆ	ನೀಡಿದೆ			ಜಿ.ಪಂ.ಘಟಕ	14.40
36)		ನಾಪೋಕ್ಲು	ನೀಡಿದೆ			ಜಿ.ಪಂ.ಘಟಕ	6.45
37)	ದಕ್ಷಿಣ ಕನ್ನಡ	ಬಂಟ್ವಾಳ	ನೀಡಿದೆ			ಜಿ.ಪಂ.ಘಟಕ	

38)		ಕುಂದಾಪುರ	ನೀಡಿದೆ		ಜಿ.ಪಂ.ಘಟಕ	ರೂ.10.15
39)		ಕಾರ್ಕಳ	ನೀಡಿದೆ		ಜಿ.ಪಂ.ಘಟಕ	10.15
40)		ಪುತ್ತೂರು	ನೀಡಿದೆ		ಜಿ.ಪಂ.ಘಟಕ	5.00
41)		ಸೂಳ್ಯ	ನೀಡಿದೆ		ಜಿ.ಪಂ.ಘಟಕ	-
42)	ಬೆಳಗಾವಿ	ಹುಕ್ಕೇರಿ(ಸಂಕೇಶ್ವರ)	ನೀಡಿದೆ		ಜಿ.ಪಂ.ಘಟಕ	ರೂ.7.00
43)		ಬೈಲಹೊಂಗಲ	ನೀಡಿದೆ		ಜಿ.ಪಂ.ಘಟಕ	8.00
44)		ಸೌವದತ್ತಿ	ನೀಡಿದೆ		ಜಿ.ಪಂ.ಘಟಕ	10.00
45)		ಗೋಕಾಕ್	ನೀಡಿದೆ		ಜಿ.ಪಂ.ಘಟಕ	4.00
46)		ಚಿಕ್ಕೋಡಿ	ನೀಡಿದೆ		ಜಿ.ಪಂ.ಘಟಕ	10.00
47)		ಆಥಣಿ	ನೀಡಿದೆ		ಜಿ.ಪಂ.ಘಟಕ	10.00
48)	ಧಾರವಾಡ	ಹಾವೇರಿ	ನೀಡಿದೆ		ಜಿ.ಪಂ.ಘಟಕ	8.91
49)		ರಾಣೆಬೆನ್ನೂರು	ನೀಡಿದೆ		ಜಿ.ಪಂ.ಘಟಕ	5.16
50)		ಶಿಗ್ಗಾಂವ್	ನೀಡಿದೆ		ಜಿ.ಪಂ.ಘಟಕ	-
51)		ಹಾನಗಲ್	ನೀಡಿದೆ	ರಾಜ್ಯ ಘಟಕ		5.28
52)		ಗದಗ	ನೀಡಿದೆ		ಜಿ.ಪಂ.ಘಟಕ	22.50
53)	ಬಿಜಾಪುರ	ಹುನಗುಂದ	ನೀಡಿದೆ		ಜಿ.ಪಂ.ಘಟಕ	1.00
54)		ಜಮಖಂಡಿ	ನೀಡಿದೆ		ಜಿ.ಪಂ.ಘಟಕ	1.00
55)		ಮುಧೋಳ್	ನೀಡಿದೆ	ರಾಜ್ಯ ಘಟಕ		10.00
56)	ಉತ್ತರ ಕನ್ನಡ	ಹಳಿಯಾಳ	ನೀಡಿದೆ		ಜಿ.ಪಂ.ಘಟಕ	4.20
57)		ಜೋಯಿಡಾ	ನೀಡಿದೆ		ಜಿ.ಪಂ.ಘಟಕ	5.84
58)		ಸಿರ್ಸಿ	ನೀಡಿದೆ	ರಾಜ್ಯ ಘಟಕ		29.79
59)		ಮುಂಡಗೋಡ	ನೀಡಿದೆ	ರಾಜ್ಯ ಘಟಕ		5.00

60)		ಯಲ್ಲಾಪುರ	ನೀಡಿದೆ	ಜಿ.ಪಂ.ಘಟಕ	7.10
61)	ಗುಲ್ಬರ್ಗಾ	ಜೇವರ್ಗಿ	ನೀಡಿದೆ	ಹೈ.ಕ.ಅ.ಮ. ಘಟಕ	ರೂ.3.49
62)	ಯಾದಗಿರ್	(ಗುರ್ಮಿಟ್ಕಲ್)	ನೀಡಿದೆ	-"-	1.60
63)	ರಾಯಚೂರು	ಗಂಗಾವತಿ	ನೀಡಿದೆ	-"-	1.00
64)		ಲಿಂಗಸಗೂರು	ನೀಡಿದೆ	-"-	9.10
65)	ಬಳ್ಳಾರಿ	ಸಿರಗುಪ್ಪ	ನೀಡಿದೆ	-"-	8.00
66)		ಹೊಸಪೇಟೆ	ನೀಡಿದೆ	-"-	7.50
67)		ಹರಪ್ಪನಹಳ್ಳಿ	ನೀಡಿದೆ	-"-	9.50
68)	ಬೀದರ್	ಹುಮನಾಬಾದ್	ನೀಡಿದೆ	-"-	6.00

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಪ್ರತಿಯೊಂದು ತಾಲ್ಲೂಕಿಗೆ ಒಂದು ಕ್ರೀಡಾಂಗಣವನ್ನು ರಚನೆ ಮಾಡಬೇಕು ಎನ್ನುವುದು ಸರ್ಕಾರದ ಒಂದು ಕಾರ್ಯಕ್ರಮ ಇದೆ. ಅದರಲ್ಲಿ ಕರ್ನಾಟಕ ರಾಜ್ಯದಲ್ಲಿ 68 ತಾಲ್ಲೂಕುಗಳಲ್ಲಿ ಕ್ರೀಡಾಂಗಣ ನಿರ್ಮಿಸಲು ಈಗಾಗಲೇ ಆಡಳಿತ ಮಂಜೂರಾತಿ ದೊರಕಿದೆ ಎಂದು ಹೇಳಿದ್ದಾರೆ. ಈ ಆಡಳಿತ ಮಂಜೂರಾತಿ ಯಾವಾಗ ದೊರಕಿದೆ? ಇನ್ನು ಎರಡನೆಯದಾಗಿ ಈ ಕ್ರೀಡಾಂಗಣ ರಚನೆ ಮಾಡುವುದಕ್ಕೆ ಕೇಂದ್ರ ಸರ್ಕಾರದ ಪಾಲು ಎಷ್ಟು, ರಾಜ್ಯ ಸರ್ಕಾರದ ಪಾಲು ಎಷ್ಟು ಮತ್ತು ಜಿಲ್ಲಾ ಪರಿಷತ್ತಿನ ಪಾಲು ಎಷ್ಟು, ಅದೇ ರೀತಿ 67 ಕ್ರೀಡಾಂಗಣಗಳು ಬೇರೆ ಬೇರೆ ಹಂತದಲ್ಲಿ ಇವೆ ಎಂದು ಹೇಳಿದ್ದಾರೆ. ಈ 68 ಕ್ರೀಡಾಂಗಣಗಳನ್ನು ರಚನೆ ಮಾಡುವುದಕ್ಕೆ ಎಷ್ಟು ಹಣ ಬೇಕಾಗುತ್ತದೆ. ಈ 67 ಕ್ರೀಡಾಂಗಣಗಳನ್ನು ಯಾವಾಗ ಮುಗಿಸುತ್ತೀರಿ ಎಂದು ಹೇಳಿ?

ಶ್ರೀ ಅಜಯ್‌ಕುಮಾರ್ ಸರ್ನಾಯಕ್ : ಮಾನ್ಯ ಅಧ್ಯಕ್ಷರೆ, ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದೊಂದು ಕ್ರೀಡಾಂಗಣ ಮಾಡಬೇಕು ಎಂದು ಸರ್ಕಾರದ ಒಂದು ಯೋಜನೆ ಇದೆ. ಇದರ ಪೈಕಿ ಈಗಾಗಲೇ ನಾವು 68 ತಾಲ್ಲೂಕುಗಳಲ್ಲಿ ಕ್ರೀಡಾಂಗಣ ನಿರ್ಮಾಣ ಕಾರ್ಯವನ್ನು ಪ್ರಾರಂಭ ಮಾಡಿದ್ದೇವೆ. ಅದರಲ್ಲಿ 48 ಕ್ರೀಡಾಂಗಣಗಳು ಜಿಲ್ಲಾಪರಿಷತ್ತು ಮುಖಾಂತರ, ನಂತರ 12 ಕ್ರೀಡಾಂಗಣಗಳು ಸ್ಪೆಟ್‌ಸೆಕ್ಟಾರ್ನಲ್ಲಿ ಮತ್ತು ಇನ್ನು 8 ಕ್ರೀಡಾಂಗಣಗಳು ಹೆಚ್ಚೆಡಿಬಿ ಯಿಂದ ಎಂದು ಈ ರೀತಿ 3 ಯೋಜನೆಗಳು ಇವೆ. ಅದರಲ್ಲಿ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣ ಪ್ರತಿಯೊಂದು ಕ್ರೀಡಾಂಗಣಕ್ಕೆ 12 ಲಕ್ಷ ರೂಪಾಯಿಗಳು. ಹಿಲ್ ಏರಿಯಾನ್ನಲ್ಲಿ 18 ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರ ಕೊಡುತ್ತಿದೆ.

12.10 ಪಿ.ಎಂ.

ಈ ಕ್ರೀಡಾಂಗಣಗಳಿಗೆ ಏನು ಆಗಿದೆ ಎಂದರೆ ಒಂದೊಂದು ಕ್ರೀಡಾಂಗಣಗಳಿಗೂ ಬೇರೆ ಬೇರೆ ರೀತಿಯಲ್ಲಿ ಖರ್ಚು ತಗಲುತ್ತದೆ. ಒಂದೊಂದು ಕ್ರೀಡಾಂಗಣಕ್ಕೆ 20 ಲಕ್ಷ ರೂಪಾಯಿಗಳಾದರೆ ಒಂದೊಂದಕ್ಕೆ 10 ಲಕ್ಷ ರೂಪಾಯಿಗಳಾಗುತ್ತದೆ. ಈ 3-4 ವರ್ಷಗಳಿಂದ ಯಾವ ಯಾವ ಕ್ರೀಡಾಂಗಣಕ್ಕೆ ಯಾವ್ಯಾವ ದಿವಸಗಳಲ್ಲಿ ಅಡ್ಮಿನಿಸ್ಟ್ರೇಟಿವ್ ಕ್ಲಿಯರೆನ್ಸ್ ಕೊಟ್ಟಿರುವ ಮಾಹಿತಿ ಈಗ ನನ್ನ ಹತ್ತಿರ ಇಲ್ಲ. ಅದನ್ನು ನಾನು ಮಾನ್ಯ ಸದಸ್ಯರಿಗೆ ನಂತರ ಒದಗಿಸುತ್ತೇನೆ.

ಶ್ರೀ ವೈ. ರಾಮಕೃಷ್ಣ : 68 ಕ್ರೀಡಾಂಗಣಗಳಲ್ಲಿ 67 ಕ್ರೀಡಾಂಗಣಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆದರೆ ಅನುಬಂಧದಲ್ಲಿ ಸೂಚಿಸಿರುವಂತೆ ಮೊದಲನೆಯದಕ್ಕೆ ಅಂದರೆ ಆನೇಕಲ್ ತಾಲ್ಲೂಕಿಗೆ ಕೇವಲ ಮೂರು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದಕ್ಕೆ ಕಾರಣವೇನು?

ಅಧ್ಯಕ್ಷರು : ಈ ಕೇಳಿದರೆ ಕೊಡುತ್ತಾರೆ.

ಶ್ರೀ ವೈ. ರಾಮಕೃಷ್ಣ : 68 ಕ್ರೀಡಾಂಗಣಗಳಿಗೂ ಅಡ್‌ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಒಂದೇ ಸಾರಿ ಕೊಟ್ಟಿದ್ದೀರೋ? ಅಥವಾ ಬೇರೆ ಬೇರೆ ತಾರೀಖುಗಳಲ್ಲಿ ಕೊಟ್ಟಿದ್ದೀರೋ?

ಶ್ರೀ ಅಜಯ್‌ಕುಮಾರ್ ಸರ್‌ನಾಯಕ್ : ಈ 68 ಕ್ರೀಡಾಂಗಣಗಳಿಗೂ ಒಟ್ಟಿಗೆ ಅಡ್‌ಮಿನಿಸ್ಟ್ರೇಟೀವ್ ಕ್ಲಿಯರೆನ್ಸ್ ಕೊಟ್ಟಿಲ್ಲ. ಬೇರೆ ಬೇರೆ ವರ್ಷಗಳಲ್ಲಿ ಬೇರೆ ಬೇರೆ ಕ್ರೀಡಾಂಗಣಗಳಿಗೆ ಅಡ್‌ಮಿನಿಸ್ಟ್ರೇಟೀವ್ ಕ್ಲಿಯರೆನ್ಸ್ ಕೊಟ್ಟಿದ್ದೇವೆ. ಇನ್ನು ಆನೇಕಲ್ ತಾಲ್ಲೂಕಿಗೆ ಕೇವಲ 3 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಹೌದು, ಅಲ್ಲಿ ಏನಾಗಿದೆ ಎಂದರೆ ಸ್ಥಳದ ಸಮಸ್ಯೆ ಇದೆ. ಮೂರು ಕಡೆಗಳಿಗೆ

ಕ್ರೀಡಾಂಗಣದ ಕೆಲಸ ಶುರು ಮಾಡಲು ಆಗಿಲ್ಲ. ಅವು ಯಾವುವೆಂದರೆ ಆನೇಕಲ್, ಸೊರಬ ಮತ್ತು ಗುಂಡ್ಲುಪೇಟೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನನ್ನ ಕ್ಷೇತ್ರವಾದ ಬಾಗೇಪಲ್ಲಿಯಲ್ಲಿ ಕ್ರೀಡಾಂಗಣಕ್ಕೆ ಹಣ ಎರಡು ಲಕ್ಷ ಆರು ಸಾವಿರ ರೂಪಾಯಿಗಳನ್ನು ಮಂಜೂರಾತಿ ದೊರೆತಿದೆ ಎಂದು ಉತ್ತರದಲ್ಲಿದೆ. ಹಣ ಎರಡು ಲಕ್ಷ ಆರು ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಈ ಎರಡು ಲಕ್ಷ 6 ಸಾವಿರ ರೂಪಾಯಿಗಳಿಂದ ಕ್ರೀಡಾಂಗಣ ಆಗುವುದಿಲ್ಲ ಮತ್ತು ಕ್ರೀಡಾಂಗಣದ ಕೆಲಸ ಒಂದು ವರ್ಷದಿಂದ ಯಾವುದೂ ನಡೆದಿಲ್ಲ. ಬಹುಶಃ ಎಲ್ಲಾ ಕ್ರೀಡಾಂಗಣಗಳ ಪರಿಸ್ಥಿತಿಯೂ ಹೆಚ್ಚು ಕಡಿಮೆ ಹೀಗೆ ಇರಬಹುದು. ಈ ರೀತಿ ಮಂಜೂರಾತಿಯನ್ನು ಕೊಟ್ಟು ಸರ್ಕಾರ ಸುಮ್ಮನೆ ಕುಳಿತರೆ ಖಂಡಿತ ಸಾಧ್ಯವಿಲ್ಲ. ಅದು ಕಾರ್ಯಗತವಾಗಿ ಕ್ರೀಡಾಂಗಣ ನಿರ್ಮಾಣವಾಗುವ ರೀತಿಯಲ್ಲಿ ಏನಾದರೂ ಕಾರ್ಯ ಪ್ರವೃತ್ತಿಯಾಗಬೇಕು. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ. ಬಾಗೇಪಲ್ಲಿ ಕ್ರೀಡಾಂಗಣಕ್ಕೆ 2 ಲಕ್ಷ ರೂಪಾಯಿಗಳನ್ನು ಸಧ್ಯಕ್ಕೆ ಕೊಟ್ಟಿದ್ದೀರಿ. ಅಷ್ಟು ಹಣದಿಂದ ಖಂಡಿತ ಕೆಲಸ ಪೂರ್ಣವಾಗಲು ಸಾಧ್ಯವಿಲ್ಲ. ಇಲ್ಲಿ ತಕ್ಷಣ ಕೆಲಸ ಪ್ರಾರಂಭವಾಗಬೇಕು. ಈ ವರ್ಷದಲ್ಲಾದಲರೂ ಆ ಕ್ರೀಡಾಂಗಣ ಪ್ರಾರಂಭವಾಗುವಂತೆ ತಾವು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಜಯ್‌ಕುಮಾರ್ ಸರ್‌ನಾಯಕ್ : ಮಾನ್ಯ ಅಧ್ಯಕ್ಷರೇ, ಬಾಗೇಪಲ್ಲಿ ಕ್ರೀಡಾಂಗಣ ಅಂದಾಜು ವೆಚ್ಚ 23.75 ಲಕ್ಷ ರೂಪಾಯಿಗಳು ಇದೆ. ಕೆಲವು ಕ್ರೀಡಾಂಗಣಗಳಿಗೆ ಕೇಂದ್ರ ಸರ್ಕಾರದಿಂದ ಹಣ ಬಂದಿಲ್ಲ. ಆದುದರಿಂದ ಕೆಲವು ಕ್ರೀಡಾಂಗಣಗಳು ಅರ್ಧದಲ್ಲೇ ನಿಂತಿವೆ. ಎಲ್ಲಾ ಕ್ರೀಡಾಂಗಣಗಳನ್ನು ಇನ್ನು ಕೆಲವು ಸಮಯದಲ್ಲಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಮಹಾನಗರಪಾಲಿಕೆಗಳಾಗಲೀ ಮತ್ತು ಪಟ್ಟಣಗಳನ್ನಾಗಲಿ ಗುರುತಿಸಿಲ್ಲ. ಪ್ರತಿ ತಾಲ್ಲೂಕು ಎಂದು ಹೇಳಿದ್ದಾರೆ. ಬೆಂಗಳೂರಿನಲ್ಲೂ ಕೂಡ 12 ಕ್ಷೇತ್ರಗಳು ಇವೆ. ಕ್ರೀಡಾಂಗಣಕ್ಕೆ ಏನು ವ್ಯವಸ್ಥೆ ಆಗಬೇಕೆಂದು ಹೇಳಿದ್ದೀರಿ, ಇದರ ಬಗ್ಗೆ ನಗರದಲ್ಲೂ ಕೂಡ ಏನಾದರೂ ಕಾರ್ಯಕ್ರಮಗಳನ್ನು ಹಾಕುವುದಕ್ಕೆ ತಾವು ಯೋಚನೆ ಮಾಡಿದ್ದೀರಾ. ಅದನ್ನು ದಯಮಾಡಿ ತಿಳಿಸಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಅಜಯ್‌ಕುಮಾರ್ ಸರ್‌ನಾಯಕ್ : ಈ ರಾಜ್ಯದ ಹಣವನ್ನೆಲ್ಲಾ ಬೆಂಗಳೂರಿನಲ್ಲೂ ಖರ್ಚು ಮಾಡುತ್ತಿದ್ದೇವೆ ಇನ್ನು ಏನು ಮಾಡಬೇಕು.

ಮಲೆನಾಡು ಅಭಿವೃದ್ಧಿ ಮಂಡಲಿಯ ವ್ಯಾಪ್ತಿಯೊಳಗೆ ಬರುವ ತಾಲ್ಲೂಕುಗಳು

94 - ಶ್ರೀ ಯು.ಬಿ. ಬಣಕರ್ (ಹಿರೇಕೆರೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಲೆನಾಡು ಅಭಿವೃದ್ಧಿ ಮಂಡಳಿಯ ವ್ಯಾಪ್ತಿಗೆ ಬರುವ ತಾಲ್ಲೂಕುಗಳಾವುವು?*

ಆ) *91-92, 92-93, 93-94 ಹಾಗೂ 94-95ರಲ್ಲಿ ಆಯವ್ಯಯದ ಪ್ರಕಾರ ನಿಗದಿಪಡಿಸಿದ ಹಣ ಮಲೆನಾಡು ಅಭಿವೃದ್ಧಿ ಮಂಡಳಿಗೆ ಎಷ್ಟು ಹಾಗೂ ಸರಕಾರ ಬಿಡುಗಡೆ ಮಾಡಿದ ಹಣವೆಷ್ಟು ಹಾಗೂ ವಾಸ್ತವಿಕ ಖರ್ಚು ಮಾಡಿರುವ ಹಣವೆಷ್ಟು?*